MYSORE LEGISLATIVE COUNCIL

Monday, 11th March 1968

The House met in the Council Chamber, Vidhana Soudha, Bangalore, at Fifteen Minutes past Two of the Clock.

Mr. CHAIRMAN (SRI S. C. EDKE) in the Chair

STARRED QUESTIONS

(to which oral answers were given)

Mr. CHAIRMAN.—Question No. 59. The Hon'ble Minister is not present. This will be taken up later.

Educational Conference

60. Sri J. B. MALLARADHYA (Legislative Assembly Constituency).—

Will the Minister for Agriculture and Education be pleased to state :—

(*a*) whether they are aware of an Educational Conference recently organised at Bangalore on the 27th and 28th January 1968 by the Board of Management of Private and Recognised Schools in the State and presided over by the Shree Swamiji of Siddaganga Mutt ;

(*b*) whether it has come to their notice that not a single Officer of the Department of Public Instruction high or low attended this conference ;

(*c*) if so, the reasons for this non-co-operation by Departmental Officers ;

(*d*) whether there is any Government order or departmental executive order preventing officers from participation in such conferences ;

(*e*) whether the non-participation of officers of the department was due to any special reason and if so, what it is ?

A.—Sri K. V. SHANKARA GOWDA (Minister for Agriculture and Education).—

(*a*) Yes.

(*b*) Yes.

(*c*) It was a conference of Private Managements. No Government Officer was expected to attend. The question of non-co-operation does not arise.

(*d*) No.

(*e*) Does not arise in view of reply to clause (*c*) above.

ಶ್ರೀ ಜೆ. ಬಿ. ಮುರ್ಲಾರಾಧ್ಯ.—ಸ್ವಾಮಿ, ತಮ್ಮ ಕಾಲದಲ್ಲಿ ವಿದ್ಯಾ ಇಲಾಖೆಯಲ್ಲಿ ಹೊಸ ಸಂಪ್ರದಾಯ ಪ್ರಾರಂಭವಾಗಿರುವಂತೆ ಕಾಣುತ್ತದೆಯಲ್ಲವೆ ?

ಶ್ರೀ ಕೆ. ವಿ. ಶಂಕರಗೌಡ.—ಹೊಸ ಸಂಪ್ರದಾಯವೇನೂ ಪ್ರಾರಂಭವಾಗಿಲ್ಲ.

ಶ್ರೀ ಜೆ. ಬಿ. ಮುರ್ಲಾರಾಧ್ಯ.—ಖಾಸಗೀ ಹಾಗೂ ಮನ್ನಣೆಪಡೆದ ಶಾಲೆಗಳ ಆಡಳಿತ ಮಂಡಲಿಯವರಿಂದ ನಡೆಯತಕ್ಕಂಥ ಸಮ್ಮೇಳನಗಳಲ್ಲಿ ಇಲಾಖಾ ಅಧಿಕಾರಿಗಳ ಸಂಪರ್ಕವಿರಬಾರದೆಂದು ಏನಾದರೂ ನಿಯಮವಿದೆಯೇ ಮತ್ತು ಏನಾದರೂ ಸಂಪರ್ಕವಿಟ್ಟುಕೊಂಡರೆ ವಿದ್ಯಾಭ್ಯಾಸದ ಪ್ರಗತಿಗೆ ಅಡ್ಡಿಯಾಗುತ್ತದೆಂದು ಭಾವನೆಯೆ ?

ಶ್ರೀ ಕೆ. ವಿ. ಶಂಕರಗೌಡ.—ಅದು ಏನೂ ಇಲ್ಲ. ಖಾಸಗಿಯವರು ನಡೆಸತಕ್ಕಂಥ ಸಮ್ಮೇಳನಗಳಲ್ಲಿ ಇನ್‌ವಿಜೇಷನ್ ಇಲ್ಲದೆ ಸರ್ಕಾರಿ ಅಧಿಕಾರಿಗಳು ಭಾಗವಹಿಸುವಂತಿಲ್ಲ. ಆದ್ದರಿಂದ ಸರ್ಕಾರದ ಅಧಿಕಾರಿಗಳು ಬೆಂಗಳೂರಿನಲ್ಲಿ ನಡೆದ ಸಮ್ಮೇಳನಕ್ಕೆ ಹೋಗಿಲ್ಲ. ಈಗ ಇರತಕ್ಕಂಥ ಸರ್ಕಾರದ ನಿಯಮಗಳ ಪ್ರಕಾರ ಖಾಸಗಿಯಾಗಿ ಅಧಿಕಾರಿಗಳಿಗೆ ಮಾತ್ರ ಇನ್‌ವಿಟೇಷನ್ ಏನಾದರೂ ಬಂದರೆ, ಅಂತಹ ಸಮ್ಮೇಳನಕ್ಕೆ ಹೋಗುವುದು ಅಥವಾ ಬಿಡುವುದು ಅಧಿಕಾರಿಗಳ ಅಧಿಕಾರಕ್ಕೆ ಒಳಪಟ್ಟಿರುತ್ತದೆ.

ಶ್ರೀ ಜೆ. ಬಿ. ಮುರ್ಲಾರಾಧ್ಯ.—ಕಳೆದ 20 ವರ್ಷಗಳ ಇತಿಹಾಸದಲ್ಲಿ ಇಂತಹ ಸಮ್ಮೇಳನದಲ್ಲಿ ಸರ್ಕಾರದ ಅಧಿಕಾರಿಗಳು ಭಾಗವಹಿಸಿರುವುದು ಇದೇ ಪ್ರಥಮ ಎಂದು ಹೇಳಿದರೆ ತಪ್ಪಾಗಲಾರದು ಅಲ್ಲವೆ ?

ಶ್ರೀ ಕೆ. ವಿ. ಶಂಕರಗೌಡ.—ಹಿಂದಿನದು ಗೊತ್ತಿಲ್ಲ. ಇದೇ ಪ್ರಥಮವೆಂದು ಕಾಣುತ್ತದೆ.

ಶ್ರೀ ಜೆ. ಬಿ. ಮುರ್ಲಾರಾಧ್ಯ.—ಖಾಸಗಿಯವರು ನಡೆಸತಕ್ಕಂಥ ಸಮ್ಮೇಳನಗಳಲ್ಲಿ ಸರ್ಕಾರೀ ಅಧಿಕಾರಿಗಳು ಭಾಗವಹಿಸುವುದರಿಂದ, ವಿದ್ಯಾಭ್ಯಾಸದ ಪ್ರಗತಿಗೆ ಪ್ರತಿಬಂಧಕ ಬರುತ್ತದೆಂದು ಸರ್ಕಾರದ ಅಭಿಪ್ರಾಯವೆ ?

ಶ್ರೀ ಕೆ. ವಿ. ಶಂಕರಗೌಡ.—ಆ ರೀತಿ ಏನೂ ಇಲ್ಲ. ಖಾಸಗಿಯವರಿಗೂ ಮತ್ತು ಸರ್ಕಾರೀ ಅಧಿಕಾರಿಗಳಿಗೂ ಒಬ್ಬರಿಗೊಬ್ಬರಿಗೆ ಸಹಾಯ ಮತ್ತು ಸಹಕಾರ ಇದ್ದರೆ ಒಳ್ಳೆಯದು. ವಾಸ್ತವಿಕವಾಗಿ ಬೆಂಗಳೂರಿನಲ್ಲಿ ನಡೆದ ಸಮ್ಮೇಳನದ ಬಗ್ಗೆ ಇನ್‌ವಿಜೇಷನ್ ಬಂದಿಲ್ಲವೆಂದು ಕಾಣುತ್ತದೆ.

ಶ್ರೀ ಜೆ. ಬಿ. ಮುರ್ಲಾರಾಧ್ಯ.—ಇನ್‌ವಿಜೇಷನ್ ಕಳಿಸಿದ್ದು ನನಗೆ ಸರಿಯಾಗಿ ಗೊತ್ತಿದೆ. ಆದರೂ ಇಹ ಸರ್ಕಾರದ ಕಡೆಯಿಂದ ಒಬ್ಬ ನರಪಿಳ್ಳೆ ಅಧಿಕಾರಿಯೂ ಸಹ ಬರದಿದ್ದುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

Sri K. V. SHANKARA GOWDA.—It was only a formal invitation. No specific invitation was sent.

ಶ್ರೀ ಜೆ. ಬಿ. ಮುರ್ಲಾರಾಧ್ಯ.—ಮೈಸೂರು ಸಂಸ್ಥಾನದಲ್ಲಿ ಬೇರೆ ಬೇರೆ ಕಡೆಗಳಲ್ಲಿ ನಡೆದಂಥ ಖಾಸಗೀ ಸಮ್ಮೇಳನಗಳಲ್ಲಿ ಸರ್ಕಾರೀ ಅಧಿಕಾರಿಗಳು ಎಷ್ಟೋ ಸಾರಿ ಭಾಗವಹಿಸಿರುವುದು ಗೊತ್ತಿದೆಯೆ ?

ಶ್ರೀ ಕೆ. ವಿ. ಶಂಕರಗೌಡ.—ಹೌದು, ಎಷ್ಟೋ ಕಡೆಗಳಲ್ಲಿ ಭಾಗವಹಿಸಿಲ್ಲ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಬೆಂಗಳೂರಿನಲ್ಲಿ ನಡೆದಂಥ ಸಮ್ಮೇಳನದಲ್ಲಿ ಸರ್ಕಾರದ ಅಧಿಕಾರಿಗಳು ಭಾಗವಹಿಸದಿರುವುದಕ್ಕೆ ಪ್ರಬಲವಾದಂಥ ಕಾರಣವೇನಾದರೂ ಇದೆಯೆ ?

ಶ್ರೀ ಕೆ. ವಿ. ಶಂಕರಗೌಡ.—ಪ್ರಬಲವಾದಂಥ ಕಾರಣಗಳು ಯಾವುದೂ ಇಲ್ಲ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಮುಂದೆಯಾದರೂ ಖಾಸಗಿಯವರು ನಡೆಸತಕ್ಕಂಥ ಸಮ್ಮೇಳನಗಳಲ್ಲಿ ಸರ್ಕಾರದ ಅಧಿಕಾರಿಗಳು ಭಾಗವಹಿಸುವಂತೆ ಆದೇಶ ಕೊಡುವುದಕ್ಕೆ ಸರ್ಕಾರಕ್ಕೆ ಸಾಧ್ಯವೆ ?

ಶ್ರೀ ಕೆ. ವಿ. ಶಂಕರಗೌಡ.—ಇದು ಕಷ್ಟವಾದಂಥ ಪ್ರಶ್ನೆ. ಖಾಸಗಿಯವರು ಸಮ್ಮೇಳನ ಮಾಡುತ್ತೇವೆಂದು ಸರ್ಕಾರಕ್ಕೆ ತಿಳಿಸಿದರೆ, ಸರ್ಕಾರದ ಅಧಿಕಾರಿಗಳು ಹೋಗಬೇಕಾದರೆ ಟಿ.ಎ., ಡಿ.ಎ. ಅನ್ನು ಕೊಡಬೇಕಾಗುತ್ತದೆ. ಇದಕ್ಕೆ ಸರ್ಕಾರದ ಅನುಮತಿ ಬೇಕಾಗುತ್ತದೆ. ಸಮ್ಮೇಳನ ವನ್ನು ನಡೆಸುವುದರಿಂದ ಖಾಸಗಿಯವರಿಗೆ ಮತ್ತು ಸರ್ಕಾರಕ್ಕೆ ಏನಾದರೂ ಅನುಕೂಲವಾಗುತ್ತದೆಂದು ಸಮ್ಮೇಳನ ನಡೆಸುವವರು ಇನ್‌ವಿಟೇಷನ್ ಕೊಟ್ಟು ತಿಳಿಸಿದರೆ ಆಗ ಅಧಿಕಾರಿಗಳನ್ನು ಕಳಿಸುವುದಕ್ಕೆ ಏರ್ಪಾಡು ಮಾಡಬಹುದು. ಎಲ್ಲಾ ಕಡೆಗೂ ಸರ್ಕಾರದ ಅಧಿಕಾರಿಗಳು ಹೋಗಬೇಕೆಂದರೆ ತೊಂದರೆಯಾಗುತ್ತದೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಈ ಸಮ್ಮೇಳನ ಬೆಂಗಳೂರಿನಲ್ಲಿಯೇ ನಡೆಯಿತು ಮತ್ತು ಇನ್‌ವಿಟೇಷನ್ ಸಹ ಕಳಿಸಲಾಗಿತ್ತು. ಆದರೂ ಸಹ ಸರ್ಕಾರದ ಅಧಿಕಾರಿಗಳು ಬಾರದಿರುವುದಕ್ಕೆ ಕಾರಣವೇನು ?

ಶ್ರೀ ಕೆ. ವಿ. ಶಂಕರಗೌಡ.—ಆಗಲೇ ತಿಳಿಸಿದ್ದೇನೆ. It is not obligatory on the part of officers to attend. Whether this is a registered body or a recognised body is not known. Moreover, it is a Board of management of the private institutions. In the absence of specific invitation and in the absence of specific instructions from Government, it is rather difficult for officers to participate in such meetings.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ರಿಜಿಸ್ಟ್ರೇಷನ್ ಆಫ್ ಸೊಸೈಟೀಸ್ ಆಕ್ಟ್ ಪ್ರಕಾರ ಬೆಂಗಳೂರಿನಲ್ಲಿ ಸಮ್ಮೇಳನ ನಡೆಸಿದಂಥ ಸಂಸ್ಥೆ ರಿಜಿಸ್ಟರ್ಡ್ ಸಂಸ್ಥೆಯಾಗಿದೆ ಮತ್ತು ವರ್ಷಾಂತರಗಳಿಂದ ಈ ರೀತಿ ಸಮ್ಮೇಳಗಳನ್ನು ನಡೆಸಿಕೊಂಡು ಬರುತ್ತಿದೆ. ಈ ಸಂಸ್ಥೆಯಲ್ಲಿ ಎಲ್ಲಾ ಅಧ್ಯಾಪಕ ವರ್ಗದ ಪ್ರತಿನಿಧಿಗಳೂ ಸಹ ಇದ್ದಾರೆ. ಇಂತಹ ಸಮ್ಮೇಳನಕ್ಕೆ ಸರ್ಕಾರದ ಅಧಿಕಾರಿಗಳು ಬರದೆ ವಕ್ರ ದೃಷ್ಟಿ ತೋರಿಸುವುದು ನ್ಯಾಯಕ್ಕೆ, ನ್ಯಾಯವೆ ?

ಶ್ರೀ ಕೆ. ವಿ. ಶಂಕರಗೌಡ.—ವಕ್ರದೃಷ್ಟಿ ಏನೂ ಇಲ್ಲ. ವಾಸ್ತವಿಕವಾಗಿ ಇನ್‌ವಿಟೇಷನ್ ಕೊಟ್ಟರೆ ಅಧಿಕಾರಿಗಳನ್ನು ಕಳಿಸಿಕೊಡಲಾಗುತ್ತದೆ.

Sanction of Promotional Vacancies for Language Teachers

61. Sri M. P. L. SASTRY (Nominated).—

Will the Minister for Agriculture and Education be pleased to state :—

(*a*) whether promotional vacancies are sanctioned for the language teachers working in the Private Aided High Schools in the State ;

(*b*) whether there are any representations in this behalf ;

(*c*) if so, the action taken by the Government thereon ?